# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 709 |
| ಮಾನ್ಯ ಸಭೆಯ ಸದಸ್ಯರ ಹೆಸರು: | ಶ್ರೀ ಬಿ. ಜಿ ಪಾಟೀಲ್ |
| ಉತ್ತರಿಸಬೇಕಾದ ದಿನಾಂಕ: | 11.12.2023 |
| ಉತ್ತರಿಸುವ ಸಚಿವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬರುವ ಜಿಲ್ಲಾ ಹಾಗೂ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ದಿನನಿತ್ಯ ಒಳ ಮತ್ತು ಹೊರರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ನುರಿತ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ವೈದ್ಯರ ಹಾಗೂ ಸಿಬ್ಬಂದಿಗಳ ಕೊರತೆ ನಿವಾರಿಸಲು ಇದುವರೆಗೂ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | (see below) |

**ಉತ್ತರ**

ಪ್ರಸ್ತುತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿಖಾಲಿಇರುವವಿವಿಧಅರೆವೈದ್ಯಕೀಯಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ:ಎಸ್.ಆರ್.ಸಿ./ಕ.ಕ./14/2022-23, ದಿನಾಂಕ: 24.08.2022 ರಲ್ಲಿ ಈ ಕೆಳಕಂಡ ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನುಆಹ್ವಾನಿಸಲಾಗಿದ್ದು, ಆಯ್ಕೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ:-

| ಕ್ರ. ಸಂ. | ಹುದ್ದೆ | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಸೈಕಾಲಜಿಸ್ಟ್ | 3 |
| 2 | ಸೈಕ್ಯಾಟ್ರಿಕ್ಸೋಷಿಯಲ್ವರ್ಕರ್ | 1 |
| 3 | ಮೈಕ್ರೋಬಯಾಲಜಿಸ್ಟ್ | 6 |
| 4 | ಸಹಾಯಕ ಎಂಟಮಾಲಜಿಸ್ಟ್ | 1 |
| 5 | ಫಿಜಿಯೋಥೆರಪಿಸ್ಟ್ | 5 |
| 6 | ಡೆಂಟಲ್ಮೆಕ್ಯಾನಿಕ್ | 3 |
| 7 | ಕಿರಿಯ ಪ್ರಯೋಗ ಶಾಲಾತಾಂತ್ರಿಕ ಅಧಿಕಾರಿ | 54 |
| 8 | ನೇತ್ರಾಧಿಕಾರಿ | 15 |
| 9 | ಫಾರ್ಮಸಿ ಅಧಿಕಾರಿ | 98 |
| 10 | ಇ.ಸಿ.ಜಿ.ತಂತ್ರಜ್ಞ | 5 |
| 11 | ಡಯಾಲಿಸಿಸ್ತಂತ್ರಜ್ಞ | 2 |
| 12 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 126 |
| 13 | ಎಲೆಕ್ಟ್ರೀಷಿಯನ್ | 1 |
| | ಒಟ್ಟು | 320 |

ಖಾಲಿ ಇರುವ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ-150 ಹಾಗೂ ಫಾರ್ಮಸಿ ಅಧಿಕಾರಿ-400 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿಮಾಡುವವರೆಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಆಯುಕ್ತಾಲಯದಿಂದ ಸುತ್ತೋಲೆ ಹೊರಡಿಸಲಾಗಿದೆ.

- ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ: ಎಸ್ಆರ್.ಸಿ./ಆರ್.ಪಿ.ಸಿ./15/2022-23, 02.09.2022 ರಲ್ಲಿ ಈ ಕೆಳಕಂಡ ಹುದ್ದೆಗಳನ್ನು ಭರ್ತಿಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರಸ್ತುತ ಅರ್ಹ ಅಭ್ಯರ್ಥಿಗಳನ್ನು ಮೂಲ ದಾಖಲಾತಿ ಪರಿಶೀಲನೆಗೆ ಆಹ್ವಾನಿಸುವ ಹಂತದಲ್ಲಿರುತ್ತದೆ.

| ಕ್ರ. ಸಂ. | ಪದನಾಮ | ಅಧಿಸೂಚಿಸಿದ ಹುದ್ದೆಗಳ ಸಂಖ್ಯೆ |
|---|---|---|
| 1. | ಫಾರ್ಮಾಸಿ ಅಧಿಕಾರಿ | 400 |
| 2. | ಕಿರಿಯ ವೈದ್ಯಕೀಯ ಪ್ರಯೋಗ ಶಾಲಾತಾಂತ್ರಿಕ ಅಧಿಕಾರಿ | 150 |
| 3. | ವಿಕಿರಣಶಾಸ್ತ್ರ ಚಿತ್ರಣ ಅಧಿಕಾರಿ | 08 |

Scanned with OKEN Scanner

ಮುಂದುವರೆದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ ಈ ಕೆಳಕಂಡ ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಯನ್ನು ನೀಡುವಂತೆ ಸ್ವೀಕೃತವಾದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ

| ಕ್ರ. ಸಂ. | ಪದನಾಮ | ಕಲ್ಯಾಣ ಕರ್ನಾಟಕ ವೃಂದ |
|---|---|---|
| 1 | ಸಹಾಯಕ ಕೀಟಶಾಸ್ತ್ರಜ್ಞರು | 2 |
| 2 | ಕ್ಲಿನಿಕಲ್ ಸೈಕಾಲಜಿಸ್ಟ್ | 2 |
| 3 | ಕಿರಿಯ ರಸಾಯನಶಾಸ್ತ್ರಜ್ಞರು | 3 |
| 4 | ಫಾರ್ಮಸಿ ಅಧಿಕಾರಿ | 65 |
| 5 | ಶುಶ್ರೂಷಾಧಿಕಾರಿ | 351 |
| 6 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ (ಕಿ.ಆ.ಸ. (ಮ)) | 133 |
| 7 | ಆರೋಗ್ಯ ನಿರೀಕ್ಷಣಾಧಿಕಾರಿ (ಕಿ.ಆ.ಸ) | 221 |
| 8 | ಕಿರಿಯ ವೈದ್ಯಕೀಯ ಪ್ರಯೋಗ ಶಾಲಾತಾಂತ್ರಿಕ ಅಧಿಕಾರಿ | 57 |
| 9 | ಹಿರಿಯ ವೈದ್ಯಕೀಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 2 |
| 10 | ಕಿರಿಯ ವೈದ್ಯಕೀಯ ವಿಕಿರಣಶಾಸ್ತ್ರ ಚಿತ್ರಣ ಅಧಿಕಾರಿ | 30 |
| 11 | ನೇತ್ರಾಧಿಕಾರಿ | 5 |
| 12 | ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು | 6 |
| 13 | ಒಟ್ಟು | 877 |

ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆ ಸಂಖ್ಯೆ :ಕ.ಲೋ.ಸೇ /281/ಪ.ಶಾ(3)2022- 23/4575, ದಿನಾಂಕ:09.01.2023. ರಲ್ಲಿ 428ದ್ವಿತೀಯ ದರ್ಜೆ ಸಹಾಯಕರುಗಳನ್ನು ಆಯ್ಕೆ ಮಾಡಿ ಆರೋಗ್ಯಮತ್ತು ಕುಟುಂಬ ಕಲ್ಯಾಣ ಸೇವೆಗಳು ಇಲ್ಲಿಗೆ ಹಂಚಿಕೆ ಮಾಡಲಾಗಿದ್ದು, ಅದರಂತೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಂಡು ಪೂರ್ಣಗೊಳಿಸಿದ್ದು, 428 ಅಭ್ಯರ್ಥಿಗಳ ಪೈಕಿ 380 ಅಭ್ಯರ್ಥಿಗಳು ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಿದ್ದು, 355 ಅಭ್ಯರ್ಥಿಗಳು ಸಮಾಲೋಚನೆಗೆ ಹಾಜರಾಗಿದ್ದು, ಮೂಲ ದಾಖಲಾತಿಯ ನೈಜತೆಗಳು ಸ್ವೀಕೃತಗೊಂಡ 348ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿದ್ದು, ಉಳಿದ 07 ಅಭ್ಯರ್ಥಿಗಳ ನೈಜತಾ ವರದಿ ಸ್ವೀಕೃತಿ ಬಾಕಿಯಿದ್ದು, ನೈಜತೆಯು ಸ್ವೀಕೃತಗೊಂಡ ನಂತರ ನೇಮಕಾತಿ ಆದೇಶ ಹೊರಡಿಸಲಾಗುವುದು.

ಉಳಿದಂತೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಭರ್ತಿ ಮಾಡಲಾಗುತ್ತದೆ.

| | | |
|---|---|---|
| ಆ | ಸದರಿ ಜಿಲ್ಲೆಗಳಲ್ಲಿರುವ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವಿದ್ಯುತ್ಕೊರತೆ ಹಾಗೂ ಅವಶ್ಯಕ ಔಷದಿಗಳ ಸಂಗ್ರಹದ ಕೊರತೆ ಮತ್ತು ಮೂಲಭೂತ ಸೌಕರ್ಯಗಳ ಕೊರತೆ ನಿವಾರಿಸಲು ಮತ್ತು ಮೂಲಭೂತ ಸೌಕರ್ಯಗಳ ಕೊರತೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು) | <u>ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೈಗೊಂಡ ಕಾಮಗಾರಿಗಳವಿವರಗಳು</u><br>• ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ, ತಾಲ್ಲೂಕು ಆಸ್ಪತ್ರೆಯ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿಯನ್ನು 2022-23ನೇ ಸಾಲಿನ SCSP ಯೋಜನೆಯಡಿ ರೂ.182.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು ಹಾಲಿ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ |

Scanned with OKEN Scanner

- ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ, ತಾಲ್ಲೂಕು ಆಸ್ಪತ್ರೆಯ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿಯನ್ನು 2022-23ನೇ ಸಾಲಿನ SCSP ಯೋಜನೆಯಡಿ ರೂ.170.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಹಾಲಿ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

**ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳು**

ಯಾದಗಿರಿ ಜಿಲ್ಲೆಯ ಶೋರಾಪುರ ತಾಲ್ಲೂಕುಮಟ್ಟದ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿಯನ್ನು 2022-23ನೇ ಸಾಲಿನ TSP ಯೋಜನೆಯಡಿ ರೂ.100.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಹಾಲಿ ಕಾಮಗಾರಿ ಪೂರ್ಣಗೊಂಡಿದ್ದು, ಉಪಯೋಗಿ ಇಲಾಖೆಗೆ ಹಸ್ತಾಂತರಿಸಬೇಕಿದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

**ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳು**

**ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳು**

| ಕ್ರ ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| **ರಾಜ್ಯವಲಯದ ಲೆಕ್ಕ ಶೀರ್ಷಿಕೆ: 4210-01-110-1-01-133 ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕು ಯೋಜನೆಯಡಿ)** | | |
| 1 | ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಮೂಲ ಸೌಕರ್ಯಗಳ ಉನ್ನತೀಕರಣ ಕಾಮಗಾರಿ | ರೂ. 200.00 |
| **ಕಟ್ಟಡ ನಿರ್ವಹಣೆ ಲೆಕ್ಕಶೀರ್ಷಿಕೆ:2210-01-110-1-21-200 ಯೋಜನೆಯಡಿ** | | |
| 1 | ಕಲಬುರಗಿ ಜಿಲ್ಲೆ ಅಫಜಲ್‌ಪುರ ತಾಲ್ಲೂಕು ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ | ರೂ .200.00 |
| 2 | ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕು ಆಸ್ಪತ್ರೆ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ | ರೂ. 200.00 |
| 3 | ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಆಸ್ಪತ್ರೆ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ | ರೂ. 200.00 |

Scanned with OKEN Scanner

ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳು

| ಕ್ರ ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| ಕಟ್ಟಡ ನಿರ್ವಹಣೆ ಲೆಕ್ಕಶೀರ್ಷಿಕೆ:2210-01-110-1-21-200 ಯೋಜನೆಯಡಿ | | |
| 1 | ಯಾದಗಿರಿ ಜಿಲ್ಲೆ ಶಹಪುರ ತಾಲ್ಲೂಕು ಆಸ್ಪತ್ರೆ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ | ರೂ.150.00 |

ಮೇಲ್ಕಂಡ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಆಕುಕ 709 ಚು. ರ. ಪ್ರ. 2023

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner

# ಅನುಬಂಧ-1

## ಲೆಕ್ಕ ಶೀರ್ಷಿಕೆ 4210-01-110-1-01-422(ಎಸ್.ಸಿ.ಎಸ್.ಪಿ) 2022-23ನೇ ಸಾಲಿನ ಕಾಮಗಾರಿಗಳು

(Rs. In Lakhs.)

| ಕ್ರಮ ಸಂಖ್ಯೆ | ಜಿಲ್ಲೆ | ತಾಲೂಕು | ವಿಧಾನ ಸಭಾ ಕ್ಷೇತ್ರ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಒಟ್ಟು ಗುತ್ತಿಗೆ ಮೊತ್ತ | ಪರಿಷ್ಕೃತ ಅಂದಾಜು ಮೊತ್ತ | ಗುತ್ತಿಗೆದಾರರ ಹೆಸರು | ಪ್ರಾರಂಭಿಸಿದ ದಿನಾಂಕ | ನಿಗದಿಪಡಿಸಿದ ಮುಕ್ತಾಯದ ದಿನಾಂಕ | ಒಟ್ಟು ವೆಚ್ಚ | ಕಾಮಗಾರಿಯ ಪೂರ್ಣಗೊಳಿಸುವ ಸಂಭವನೀಯ ದಿನಾಂಕ | ಕಾಮಗಾರಿಯ ಭೌತಿಕ ಪ್ರಗತಿ |
|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | ಕಲಬುರಗಿ | ಚಿತ್ತಾಪೂರ | ಚಿತ್ತಾಪೂರ | ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ಆಸ್ಪತ್ರೆಯ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ | 182.00 | 134.45 | 158.65 | ಮೇ: ಸಿಂಗಾಡೆ ಕನ್ಸ್ಟ್ರಕ್ಷನ್ | 02.02.2023 | 01.07.2023 | 79.51 | 31.12.2023 | ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ |
| 2 | ಕಲಬುರಗಿ | ಚಿಂಚೋಳಿ | ಚಿಂಚೋಳಿ | ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಆಸ್ಪತ್ರೆಯ ಮೂಲಭೂತ ಸೌಕರ್ಯಗಳ ಉನ್ನತೀಕರಣ ಕಾಮಗಾರಿ | 170.00 | 139.79 | 164.95 | ಶ್ರೀ ರೇವಣಸಿದ್ದಪ್ಪಾ ಚಂದ್ರಶೇಖರ್ | 30.01.2023 | 29.07.2023 | 0.00 | 31.12.2023 | ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. |

## ಲೆಕ್ಕ ಶೀರ್ಷಿಕೆ 4210-01-110-1-01-423 (ಟಿ.ಎಸ್.ಪಿ) 2022-23ನೇ ಸಾಲಿನ ಕಾಮಗಾರಿಗಳು

| | | | | | | | | | | | | | |
|---|---|---|---|---|---|---|---|---|---|---|---|---|---|
| 7 | ಯಾದಗಿರಿ | ಶೋರಾಪೂರ | ಶೋರಾಪೂರ | ಯಾದಗಿರಿ ಜಿಲ್ಲೆಯ ಶೋರಾಪೂರ ತಾಲೂಕು ಮಟ್ಟದ ಮೂಲಭೂತ ಸೌಕರ್ಯಗಳ ಉನ್ನತೀಕರಣ ಹಾಗೂ ಕಾಮಗಾರಿ | 100.00 | 78.04 | 92.09 | ಶ್ರೀ ಗುಂತಪಲ್ಲಿ ನರೇಂದ್ರ | 16.02.2023 | 15.07.2023 | 68.77 | ಕಾಮಗಾರಿ ಪೂರ್ಣಗೊಂಡಿದೆ | ಕಾಮಗಾರಿ ಪೂರ್ಣಗೊಂಡಿದೆ (ಹಸ್ತಾಂತರಿಸಬೇಕಾಗಿದೆ) |
| | | | | | | | | | | | | | |